ಚಪ್ಪಲಿ ಬಿಡುವ ಸ್ಥಳ ನನಗೆ ಯಾವಾಗಲೂ ಒಂದು ದೊಡ್ಡ ರೂಪಕ. ರಾಜ ಮಹಾರಾಜರು, ಮಂತ್ರಿಗಳ ಚಪ್ಪಲಿಗಳು ಕೂಡ ಇರುತ್ತವೆ. ಆದರೆ ಅವರು ಚಪ್ಪಲಿಗಳನ್ನು ಕಳಚುವುದಿಲ್ಲ. ಚಪ್ಪಲಿ ಹಾಕಿಕೊಂಡೇ ಕೂಡುತ್ತಾರೆ. ಹೀಗಾಗಿ ಅವುಗಳನ್ನು ಬಿಡುವ ಸ್ಥಳಗಳು ನನಗೆ ಗೊತ್ತಿಲ್ಲ. ಅವರು ಯಾವಾಗಲೂ ಚಪ್ಪಲಿಯೊಳಗೆ ಕಾಲು ತೂರಿಸಿಕೊಂಡೇ ಇರುತ್ತಾರೆ. ಜೊತೆಗೆ ಬೇರೆಯವರ ತಲೆಯ ಮೇಲೆ ಚಪ್ಪಲಿ ಸಮೇತ ತಮ್ಮ ಕಾಲುಗಳನ್ನು ಇಡುತ್ತಾರೆ. ಅವರು ಚಪ್ಪಲಿಗಳನ್ನಿಟ್ಟ ತಲೆಗಳ ಜೊತೆ ನನ್ನ ಕಾವ್ಯವಿದೆ.

ಸಂಪೂರ್ಣತೆಯ ಸ್ವರೂಪ ಒದಗುತ್ತದೆ. ಇಲ್ಲವಾದರೆ ಅವನು ವಿರೂಪ. ಸೃಷ್ಟಿಯ ನಿಯಮವಿದು. ಈ ಸೃಷ್ಟಿಯ ಮೂಲವನ್ನು ಹಿಡಿಯಲು ಹೋದಾಗ ಕವಿತೆ ಸೆನ್ಸುವಲ್ ಆಗುತ್ತದೆ. ಕಾಳಿದಾಸ ತನ್ನ ಕಾವ್ಯದಲ್ಲಿ ಶಿವ ಮತ್ತು ಪಾರ್ವತಿಯ ದೇಹದ ವರ್ಣನೆಯನ್ನು ಯಾವ ಸ್ತರಕ್ಕೆ ಒಯ್ದಿದ್ದಾನೆ ನೋಡಿ. ವಾಲ್ಮೀಕಿಯನ್ನೇ ನೋಡಿ. ಅಕ್ಕನ ವಚನವನ್ನೇ ನೋಡಿ. ಚೆನ್ನಮಲ್ಲಿಕಾರ್ಜುನನೆಂದರೆ ಬೆಲ್ಲದ ಅಚ್ಚಿನಂತೆ ಯಾವ ಮಗ್ಗುಲಿನಿಂದ ಚುಂಬಿಸಿದರೂ ಸಿಹಿಯಾಗಿಯೇ ತೋರಿದ್ದಾನೆ. ಕಬೀರರ ರಚನೆಗಳಲ್ಲೂ ಜೀವಬ್ರಹ್ಮದ ಮಿಲನದ ಸಂದರ್ಭಗಳೇ ಅವರ ಕಾವ್ಯದ ಶ್ರೇಷ್ಠ ಸಂದರ್ಭಗಳು. ಅನೇಕರ ಕಾವ್ಯದ ಚರಮ ಸ್ಥಿತಿಗಳು ಇಂಥ ಮಿಲನದ ಸಂದರ್ಭದಲ್ಲಿಯೇ ನಿರ್ಮಾಣಗೊಂಡಿವೆ. ಇದು ಬದುಕಿನ ಅನಿವಾರ್ಯವಾದ ಕರ್ಮ. ಕಾವ್ಯದ ಅನಿವಾರ್ಯವಾದ ಕರ್ಮ ಕೂಡ. ಕವಿತೆ ಸೀಮಿತ ದಾರಿಗಳನ್ನು ಆಯ್ಕೆ ಮಾಡಿಕೊಳ್ಳಬಾರದು. ಹಾಗಾದಾಗ ಅದರ ಅನಂತ ದಾರಿಗಳು ಕ್ಷೀಣಿಸುತ್ತವೆ.

◆ **ನನ್ನ ಸೀಮಿತ ಓದಿನಲ್ಲಿ ಹೇಳಬಹುದಾದರೆ, ನಿಮ್ಮ ಬಹುತೇಕ ಕವಿತೆಗಳು ವಾಸ್ತವ ಮತ್ತು ಸೆನ್ಸುವಲ್ ಆದ ಜಗತ್ತನ್ನು ಹಿಡಿಯಹೊರಟಂಥವು. ಅಲ್ಲಿ ಆರ್ದ್ರ ಮತ್ತು ತೀವ್ರ ಅನುಭವಗಳ ತಾಣಗಳಿವೆ. ಮನುಷ್ಯ ಸಂಬಂಧಗಳ ಸಂಕೀರ್ಣ ಜಗತ್ತಿದೆ. ರಾಜಕೀಯ ಪ್ರಜ್ಞೆಯನ್ನು ಹುಸಿಯಿಲ್ಲದಂತೆ ಕಾಣಿಸಿದ ಕವಿತೆಗಳು ಕೂಡ ಇವೆ. ಆದರೆ ಹಿಂದಿಯಲ್ಲೇ ಇರುವ ದೊಡ್ಡದೊಂದು ಮಿಥಕಗಳ ಜಗತ್ತು ನಿಮ್ಮ ಕಾವ್ಯದಲ್ಲಿ ಇಲ್ಲ. ವಾಸ್ತವದಲ್ಲಿಯೇ ಮೈತಳೆಯಬೇಕೆಂಬ ಹಟ ತೊಟ್ಟಂತೆ ನಿಮ್ಮ ಕಾವ್ಯ ಕಾಣಿಸುತ್ತಿದೆ. ಆದರೆ ನಿಮ್ಮ ಓದಿನಲ್ಲಿ ಈ ಎಲ್ಲಾ ಜಗತ್ತುಗಳಿವೆ. ಕಾವ್ಯದ ಅಭಿವ್ಯಕ್ತಿಯಲ್ಲಿ ಇದಿಲ್ಲ. ಹೀಗ್ಯಾಕೆ ಅನ್ನೋ ಕುತೂಹಲ ನನ್ನದು.**

ಇದು ಮಹತ್ವದ ಅಂಶ. ನೀವು ಪ್ರಸ್ತಾಪಿಸಿದ್ದು ಒಳ್ಳೆಯದಾಯಿತು. ಹಿಂದಿಯಲ್ಲಿ ಮಿಥಕಗಳ ಜೊತೆ ಒಡನಾಟವಿಟ್ಟುಕೊಂಡ ಹಲವಾರು ಕವಿಗಳಿದ್ದಾರೆ. ಅವರೆಲ್ಲ ನನ್ನ ಪ್ರಿಯ ಕವಿಗಳೆ. ನಿರಾಲಾ ಅವರ 'ರಾಮ್ ಕಿ ಶಕ್ತಿಪೂಜಾ', ಜಯಶಂಕರ ಪ್ರಸಾದ್ ಅವರ 'ಕಾಮಾಯಿನಿ', ಆಗ್ನೇಯ ಅವರ 'ಅಸಾಧ್ಯವೀಣಾ', ರಾಮಧಾರಿಸಿಂಗ್ ದಿನಕರ್ ಅವರ ಬಹುತೇಕ ಕವಿತೆಗಳು ಇಂಥ ಜಗತ್ತಿಗೆ ಸೇರಿವೆ. ಕುಂವರ್ ನಾರಾಯಣ, ಕೇದಾರನಾಥ ಸಿಂಗ್ ಕೂಡ ಇಂಥ ಕವಿತೆಗಳನ್ನು ಬರೆದಿರುವರು. ಬಹುಶಃ ಆಧುನಿಕತೆಯ ಪ್ರಭಾವ ಹಿಂದಿ ಕಾವ್ಯದ ಮೇಲೆ ಆಗಲು ಶುರುವಾದ ಮೇಲೆ ಮಿಥಕಗಳು ಅನೇಕರಲ್ಲಿ ಮುನ್ನೆಲೆಗೆ ಬಂದವು. ಗುಜರಾತಿ ಕಾವ್ಯದಲ್ಲೂ ಹೀಗಾಯಿತು. ಸೀತಾಂಶು ಯಶ್ಚಂದ್ರ ಅವರ 'ಜಟಾಯು ಮತ್ತು ಇತರ ಕವಿತೆಗಳು' ಸಂಕಲನ ಗಮನಿಸಿ. ಅನೇಕ ಭಾಷೆಗಳಲ್ಲಿ ಹೀಗಾಗಿದೆ. ಆದರೆ ನನ್ನ ಕಾವ್ಯದಲ್ಲಿ ಹೀಗಾಗಲಿಲ್ಲ. ನಾನೇನು ಯೋಚಿಸಿದೆನೆಂದರೆ, ಟಾಲ್‌ಸ್ಟಾಯ್ ಯಾವ ಕಾದಂಬರಿಯನ್ನೂ ಕೂಡ ಮಿಥಕಗಳನ್ನು ಬಳಸಿ ಬರೆಯಲಿಲ್ಲ. ದಾಸ್ತೊವಸ್ಕಿ, ತುರ್ಗೆನೇವ್, ಬಾಲ್ಜಾಕ್, ಪ್ರೇಮಚಂದ್ ಕೂಡ. ಈ ಜೀವನವನ್ನೇ ಕಲೆಯಲ್ಲಿ ಚಿತ್ರಿಸತೊಡಗಿದರು. ಜೀವನದ ಯಕ್ಷಿಣಿಯನ್ನು ಕಾಣಿಸಿದರು. ತತ್ಕಾಲದ ಅನುಭವ, ಭಾಷೆಯಲ್ಲೇ